ಉದ್ಭವಿಸುವುದಿಲ್ಲ.

ವಿಷಯ :-ಬೀದರ್ ಡಿಸಿಸಿ ಬ್ಯಾಂಕಿನ ಸರ್ಕಾರಿ ಷೇರು ಹಣವನ್ನು ವಾಪಸ್ಸು ಮಾಡಿರುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 378(545)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್(ಬಸವಕಲ್ಯಾಣ)

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಡಿ.ಸಿ.ಸಿ. ಬ್ಯಾಂಕಿನಲ್ಲಿದ್ದ ಸರ್ಕಾರಿ ಷೇರು ಹಣದ ಮೊತ್ತವೆಷ್ಟು?

ಆ) ಈ ಶೇರು ಹಣವನ್ನು ಬ್ಯಾಂಕಿನವರು ಸರ್ಕಾರಕ್ಕೆ ವಾಪಸ್ಸು ಮಾಡಲು ಕಾರಣಗಳೇನು?

ಇ) ರೈತಾಪಿ ಜನರ ಅನುಕೂಲಕ್ಕಾಗಿ ಸರ್ಕಾರದವರು ಬಡ್ಡಿ ರಹಿತ ಶೇರು ಹಣವನ್ನು ಇಟ್ಟಿದ್ದು ಈಗ ಅದನ್ನು ವಾಪಸ್ಸು ಮಾಡಿರುವುದರಿಂದ ರೈತರಿಗೆ ತೊಂದರೆಯಾಗುತ್ತಿಲ್ಲವೆ?

ಈ) ಮತ್ತೆ ಈ ಹಣವನ್ನು ಬ್ಯಾಂಕಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ದಿನಾಂಕ : 31-03-1993ಕ್ಕೆ ಒಟ್ಟು ರೂ. 71.00 ಲಕ್ಷ.

ಕಾರಣ ಗೊತ್ತಿರುವುದಿಲ್ಲ.

ಶೇರು ಹಣ ಬಡ್ಡಿರಹಿತವಾಗಿರುವುದಿಲ್ಲ. ವಾಪಸ್ಸು ಮಾಡಿದ ಶೇರು ಹಣವನ್ನು ಜಿಲ್ಲಾ ಬ್ಯಾಂಕಿನ ಲೆಕ್ಕಕ್ಕೆ ಪುನಃ ಜಮಾ ಮಾಡಿರುವುದರಿಂದ ರೈತರಿಗೆ ತೊಂದರೆ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈಗಾಗಲೇ ಮೇಲೆ ತಿಳಿಸಿದ ಕ್ರಮ ಕೈಗೊಳ್ಳಲಾಗಿದೆ.

ವಿಷಯ : - ಬೀದರ್ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶಕ್ಕೆ ಪರಿಹಾರ ನೀಡದೆ ಇರುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 379(544)

ಶ್ರೀ ಬಸವರಾಜ್ ಪಾಟೀಲ್(ಬಸವಕಲ್ಯಾಣ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಗರಿ ಬೆಳೆ ನಾಶವಾಗಿರುವ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ?

ಇ) ರಾಜ್ಯದ ಇತರೆ ಯಾವಯಾವ ಭಾಗಗಳಲ್ಲಿ ತೊಗರಿ ಬೆಳೆ ನಾಶವಾಗಿದೆ.

ಈ) ಬೀದರ್ ಜಿಲ್ಲೆಯನ್ನು ಬಿಟ್ಟು ಉಳಿದ ಭಾಗಗಳಲ್ಲಿ ತೊಗರಿ ಬೆಳೆ ನಾಶಕ್ಕೆ ಪರಿಹಾರ ನೀಡುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಬೀದರ್ ಜಿಲ್ಲೆಯಲ್ಲಿ ನಾಶವಾಗಿರುವ ತೊಗರಿ ಬೆಳೆಗೆ ರೈತರಿಗೆ ಪರಿಹಾರ ನೀಡದೇ ಇರಲು ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಬಂದಿದೆ.

ಕೃಷಿ ಇಲಾಖೆಯ ವತಿಯಿಂದ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ತಜ್ಞರಿಂದ ಸಮೀಕ್ಷೆ ನಡೆಸಿರುತ್ತದೆ.